ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕಲಿಕೆಯ ಅವಕಾಶಗಳನ್ನು ಸೃಷ್ಟಿಸುವುದು

ಅನುಪಮಾ ರೈ

ನೀವು ವಿಶೇಷ ಅಗತ್ಯವುಳ್ಳ ಮಗುವಿನ ಪೋಷಕರಾಗಿದ್ದರೆ ಸುರಕ್ಷಿತ ಮತ್ತು ಕೈಗೆಟುಕುವ ಕಲಿಕಾ ಅವಕಾಶಗಳಿಗಾಗಿ ಹುಡುಕಾಡುವುದು ನಿಮಗೆ ಒಂದು ಎದೆಗುಂದಿಸುವ ಕಾರ್ಯ ಅನ್ನಿಸೀತು. ನಾನು ನನ್ನ ಮಗನಿಗಾಗಿ ತೆಗೆದುಕೊಂಡ ಕೆಲವು ಹಂತಗಳ ರೂಪರೇಖೆಯನ್ನು ಈ ಲೇಖನದಲ್ಲಿ ನೀಡುತ್ತೇನೆ.

ವಿಶೇಷ ಅಗತ್ಯವುಳ್ಳವರಿಗೆ ಉದ್ಯೋಗ ಉತ್ತೇಜನಕ್ಕಾಗಿ ಇರುವ ರಾಷ್ಟ್ರೀಯ ಕೇಂದ್ರ (National Centre for Promotion of Employment for Disabled People-NCPEDP) ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿನ ವಿಶೇಷ ಅಗತ್ಯವುಳ್ಳವರ (PwDs) ಪೈಕಿ ಕೇವಲ ಶೇಕಡಾ 1.2ರಷ್ಟು ಮಂದಿ ಮಾತ್ರ ವಿವಿಧ ಬಗೆಯ ಶಿಕ್ಷಣ ಪಡೆಯುತ್ತಿದ್ದಾರೆ. ಅಖಿಲ ಭಾರತ ಶಾಲಾ ಮಟ್ಟದಲ್ಲಿ ಎನ್‌ಸಿಪಿಇಡಿಪಿ ಸಮೀಕ್ಷೆಗೆ ಒಳಗಾದ 89 ಶಾಲೆಗಳ ಪೈಕಿ 34 ಶಾಲೆಗಳಲ್ಲಿ ಒಬ್ಬನೇ/ಳೇ ಒಬ್ಬ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿ ಕಾಣಿಸಲಿಲ್ಲ. ದುರದೃಷ್ಟವಶಾತ್, ಇವುಗಳ ಪೈಕಿ 18 ಶಾಲೆಗಳು ಇಂತಹ ಮಕ್ಕಳನ್ನು ದಾಖಲಿಸುವುದರ ವಿರುದ್ಧದ ನೀತಿಯನ್ನೇ ಹೊಂದಿವೆ. (ಸಖುಜಾ, 2004)

ಮುಖ್ಯವಾಗಿ ದೃಷ್ಟಿ, ಮಾತು, ಭಾಷೆಯಲ್ಲಿ ಕಲಿಕಾ ತೊಂದರೆಗಳು ಶ್ರವಣ ದೋಷ, ಮಾಂಸಖಂಡ ಅಸ್ಥಿವ್ಯವಸ್ಥೆ ಅಥವಾ ನರವ್ಯೂಹ ವ್ಯವಸ್ಥೆಯಲ್ಲಿ ನೋವು ಅಥವಾ ಇವೆರಡೂ ತೊಂದರೆಗಳು, ಕಲಿಕಾ ನ್ಯೂನತೆಗಳು, ಸ್ವಲೀನತೆಯ ಸಮಸ್ಯೆ (Autism spectrum disorders), ಮಾನಸಿಕ ಸಮಸ್ಯೆಗಳು, ತೀವ್ರ ನರದೌರ್ಬಲ್ಯಗಳಿಂದ ಉಂಟಾಗುವ ವೈಕಲ್ಯ, ಬಹು ವೈಕಲ್ಯಗಳು ಅಥವಾ ಕೇಂದ್ರ ಸರ್ಕಾರದ ಅಧಿಸೂಚನೆಯಲ್ಲಿ ಹೇಳಲಾದ ಇತರ ವರ್ಗಕ್ಕೆ ಸೇರಿದ ವೈಕಲ್ಯಗಳು ಕಲಿಕೆಗೆ ತೊಡಕು ಉಂಟು ಮಾಡುವ ವೈಕಲ್ಯಗಳಾಗಿವೆ.

"ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ, ಶಿಕ್ಷಣಶಾಸ್ತ್ರವು ಹೆಚ್ಚಾಗಿ ದೃಶ್ಯಕ್ಕಾಗಿ ಪಠ್ಯಪುಸ್ತಕಗಳನ್ನು ಮತ್ತು ಕರಿಹಲಗೆಗಳನ್ನು ಅವಲಂಬಿಸಿದೆ. ಇದು ಶ್ರವಣದೋಷ ಅಥವಾ ದೃಷ್ಟಿದೋಷ ಇರುವ ಮಕ್ಕಳಿಗೆ ಇನ್ನಿಲ್ಲದ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಅಂತಹ ಮಕ್ಕಳಿಗೆ ನಾಟಕ, ಸಂಗೀತ, ಚಿತ್ರ ರಚನೆ, ದೃಶ್ಯ-ಶ್ರವಣ ಸಾಧನಗಳ ಬಳಕೆಯನ್ನು ಒಳಗೊಂಡ ಚಟುವಟಿಕೆಗಳು ಅತ್ಯಗತ್ಯ. ಉದಾಹರಣೆಗೆ ಮರಳುಕಾಗದದ ಕತ್ತರಿಸಿದ ತುಂಡುಗಳ ಮೂಲಕ ವರ್ಣಮಾಲೆಯ ಕಲಿಕೆ, ಅಕ್ಷರಗಳ ಗುರುತು ಹಿಡಿಯುವುದು, ದೇಹದ ಚಲನೆ (ನೃತ್ಯದಲ್ಲಿ ಇರುವಂತೆ), ಧ್ವನಿಗಳು ಇತ್ಯಾದಿ ಹೆಚ್ಚು ಸೂಕ್ತವಾದವು. ಭೂಗೋಳ ಶಾಸ್ತ್ರದಲ್ಲಿ ಪರಿಭ್ರಮಣ ಮತ್ತು ಕಕ್ಷೆಯ ಕ್ರಮಣ ಇರುವಂತೆ ಪರಿಕಲ್ಪನೆಗಳನ್ನು ತಿಳಿಸುವ ಚಟುವಟಿಕೆಗಳು, ಕರಕುಶಲ ಚಟುವಟಿಕೆಗಳ ಮೂಲಕ, ಇಲ್ಲವೇ ಪಾತ್ರಾಭಿನಯದ ಮೂಲಕ ವಿದ್ಯಾರ್ಥಿಗಳು ಗ್ರಹಿಸಿದ್ದಾರೆಯೇ ಎನ್ನುವುದನ್ನು ಖಾತರಿಪಡಿಸಬಹುದು. ಇಂತಹ ಬಹು-ಇಂದ್ರಿಯ ಬೋಧನಾ ವಿಧಾನಗಳು ಒಂದಕ್ಕಿಂತ ಹೆಚ್ಚು ಇಂದ್ರಿಯಗಳ ಮೂಲಕ ಕಲಿಯಲು ಮಗುವಿಗೆ ಸಹಾಯ ಮಾಡುತ್ತದೆ".

ಹೀಗಿದ್ದರೂ ವಿಶೇಷ ಅಗತ್ಯವುಳ್ಳ ಮಗು ದೃಷ್ಟಿ ಅಥವಾ ಶ್ರವಣ ಅಥವಾ ಈ ಎರಡಕ್ಕೂ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಬಹುದು. ಮಗುವಿನ ದೃಶ್ಯ ಪ್ರಕ್ರಿಯೆಯ ಮೇಲೆ ದುಷ್ಪರಿಣಾಮ ಬೀರಬಹುದು. ಹುಡುಕಾಟ ಮತ್ತು ದಿಕ್ಕು ತಿಳಿಯುವಲ್ಲಿ ಕಷ್ಟ ಆಗಬಹುದು. ಇದಕ್ಕೆ ಉತ್ತರ ಎಂದರೆ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಇಂದ್ರಿಯಗಳನ್ನು ಒಟ್ಟಿಗೆ ಸೇರಿಸಿ ಬೋಧನೆಯಲ್ಲಿ ಬಳಸುವುದೇ ಆಗಿದೆ. ವರ್ಣಮಾಲೆ ರಚನೆಯ ಕಲಿಕಾ ಸಂದರ್ಭದಲ್ಲಿ ಮುಖ್ಯವಾಗಿ ಚಲನಾತ್ಮಕ (Kinetic) ಮತ್ತು ಸ್ಪರ್ಶಜ್ಞಾನ (Tactile) ಇವೆರಡನ್ನೂ ಬಳಸುವ ಮೂಲಕ ಸಮಸ್ಯೆಗೆ ಉತ್ತರ ಕಂಡುಕೊಳ್ಳಬಹುದು. ಉದಾಹರಣೆಗೆ, ಶೇವಿಂಗ್ ಫೋಮ್ ಅನ್ನು ಬಳಸಿ ತಟ್ಟೆಯಲ್ಲಿ ಅಕ್ಷರ ಬರೆಯಲು ಮಗುವನ್ನು ಪ್ರೋತ್ಸಾಹಿಸುವುದು. ಇದು ಮಗುವಿನ ಮಿದುಳಲ್ಲಿ ದೃಶ್ಯ ಮತ್ತು ಶ್ರವಣಕ್ಕೆ ಸಂಬಂಧಿಸಿದ ಸ್ಪರ್ಶ ಮತ್ತು ಚಲನೆಯ ನೆನಪುಗಳನ್ನು ಅಚ್ಚೊತ್ತಬಹುದು.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹೇಳಿಕೊಡಬೇಕಿದ್ದರೆ ಪ್ರತಿಯೊಂದೂ ಸ್ಪರ್ಶಿಸುವಂಥದ್ದೇ ಆಗಿರಬೇಕಾಗುತ್ತದೆ: ಒಬ್ಬ ಅನುಭವಿ ವಿಶೇಷ ಶಿಕ್ಷಕರ ಪ್ರಕಾರ 'ಮೊದಲು ವಸ್ತು, ಅನಂತರ ಕಲ್ಪನೆ'. ತರಗತಿ ಕೊಠಡಿ ಮತ್ತು ಇತರ ಬೋಧನಾ ಪರಿಸರವು ಮಕ್ಕಳಿಗೆ ಆಟದ ರೂಪದಲ್ಲಿ ಕಲಿಯಲು ಸಾಕಷ್ಟು ಅವಕಾಶಗಳನ್ನು ಕೊಡಬೇಕು ಮತ್ತು ವೇಗದ ಓದುವಿಕೆ ಮತ್ತು ಬರವಣಿಗೆಯ ಕೌಶಲ್ಯಗಳಿಗೆ ಒತ್ತು ನೀಡುವುದು ಹಿಂದಕ್ಕೆ ಸರಿಯುವಂತೆ ಆಗಬೇಕು. ಒಂದು ದಿನ ನಾನು ನನ್ನ ಮಗನಿಗೆ ಅವನ ಶಾಲೆಯ ವಿಶೇಷ ಶಿಕ್ಷಕರ ಕೊಠಡಿಯಲ್ಲಿ ಚೆಂಡು ಮತ್ತು ಯೋಗದ ಹಾಸು ಬಳಸಿ ಇಂದ್ರಿಯಕ್ಕೆ ಸಂಬಂಧಿಸಿದ ವಿರಾಮ ಕೊಡುತ್ತಿದ್ದಾಗ, ಅದೇ ಹೊತ್ತಿಗೆ ವಿಶೇಷ ಶಿಕ್ಷಕರು ತರಗತಿ ಮಾಡುತ್ತಿದ್ದರೂ, ಅವನು ಚೆಂಡಿನ ಎಲ್ಲ ಚಲನೆಯ ಕಡೆಗೆ ಆಕರ್ಷಿತನಾದ. ಆತ ತನ್ನ ದೇಹದ ಮೂಲಕ ಕಲಿಯುವುದಕ್ಕೆ ಆದ್ಯತೆ ನೀಡಿದ. ಕಲಿಕೆಯ ಸಮಸ್ಯೆ ಇರುವ ಮಕ್ಕಳು ಎಲ್ಲವನ್ನೂ ತಮ್ಮ ಕೈಯಿಂದಲೇ ಮಾಡುತ್ತಾ ತಮ್ಮ ದೇಹದಿಂದಲೇ ಕಲಿಯಬೇಕು. ಪ್ರತಿಯೊಂದು ಕ್ರಿಯೆ ಕೂಡ ಅವರಿಗೆ ಹೊಸ ಪದವನ್ನು ಕಲಿಸಿಕೊಡುತ್ತದೆ. ತರಗತಿ ಕೊಠಡಿಗಳಲ್ಲಿ ತಮ್ಮ ಜಾಗೃತಾವಸ್ಥೆ, ಸುಸ್ಥಿರ ಗಮನ ಮತ್ತು ಶ್ರದ್ಧೆಯ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವರಿಗೆ ಇತರ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಚಲನೆಗಳು ಬೇಕಾಗುತ್ತವೆ. ಇಲ್ಲದಿದ್ದರೆ ಅವರು ಪಾಠದ ವಿಚಾರದಲ್ಲಿ ಬಹಳ ಸುಲಭವಾಗಿ ಹಳಿತಪ್ಪಿ ಬಿಡುತ್ತಾರೆ. ಮೂಲಭೂತ ವಿಚಾರಗಳನ್ನು ಗ್ರಹಿಸುವುದಕ್ಕಾಗಿ ಅವರು ಪದೇ ಪದೇ ತಮ್ಮ ಅಧ್ಯಾಪಕರ ಪಾಠ ನಿಲ್ಲಿಸಬೇಕಾಗುತ್ತದೆ ಮತ್ತು ಅನೇಕ ಸಲ ಪಾಠದ ಪರಿಕಲ್ಪನೆಗಳನ್ನು ಪುನರಾವರ್ತನೆ ಮಾಡಿಸಿಕೊಳ್ಳಬೇಕಾಗುತ್ತದೆ.

ಕ್ರೀಡಾ ಚಿಕಿತ್ಸಕರು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಅದ್ಭುತವನ್ನೇ ಮಾಡುತ್ತಿದ್ದಾರೆ. ಮಕ್ಕಳು ಯಾವುದೇ ಬಗೆಯ ವಿಕಲತೆಯಿಂದ ಇರಲಿ ಅವರು ಮನರಂಜನೆಯ ತಂತ್ರ ಬಳಸಿ ಗುಂಪಿನ ಭಾಗವಾಗಿರುವಂತೆ ನೋಡಿಕೊಳ್ಳುತ್ತಾರೆ. ಅದೇ ಹೊತ್ತಿಗೆ ವೃತ್ತಿಪರ ಚಿಕಿತ್ಸಕರು ಮಕ್ಕಳ ಅಗತ್ಯಕ್ಕೆ ಅನುಗುಣವಾದ ಅಭ್ಯಾಸ ಮತ್ತು ಚಟುವಟಿಕೆಗಳನ್ನು ವಿನ್ಯಾಸಗೊಳಿಸುತ್ತಾರೆ.

ಪ್ರತಿಯೊಂದು ಶಾಲೆ ಕೂಡ ವಿಶೇಷ ಶಿಕ್ಷಕರನ್ನು ಹೊಂದಿರಬೇಕು ಎಂದು ಸಿಬಿಎಸ್ಇ ಕಡ್ಡಾಯಗೊಳಿಸಿದೆ. ಬೇಸರದ ಸಂಗತಿ ಎಂದರೆ ಬಹುತೇಕ ಶಾಲೆಗಳಲ್ಲಿ ವಿಶೇಷ ಶಿಕ್ಷಕರು ಒಂದೋ ಕಳಪೆ ತರಬೇತಿ ಪಡೆದವರಾಗಿರುತ್ತಾರೆ ಅಥವಾ ರಜೆಯ ಮೇಲೆ ತೆರಳಿದ ಅಧ್ಯಾಪಕರ ಬದಲಿಗೆ ಬಂದವರಾಗಿರುತ್ತಾರೆ ಅಥವಾ ಪರೀಕ್ಷೆ ಇಲ್ಲವೇ ಕ್ರೀಡಾ ಚಟುವಟಿಕೆಗಳಲ್ಲಿ ಮಾತ್ರ ಸಹಾಯಹಸ್ತ ಚಾಚುತ್ತಾರೆ.

ಬಹುತೇಕ ಪ್ರಕರಣಗಳಲ್ಲಿ, ವಿವಿಧ ತರಗತಿಗಳಲ್ಲಿ ಕಲಿಯುವ ಮತ್ತು ವಿವಿಧ ಬಗೆಯ ವೈಕಲ್ಯವನ್ನು ಹೊಂದಿರುವ ಹದಿನೈದು ಇಪ್ಪತ್ತು ವಿದ್ಯಾರ್ಥಿಗಳ ಗುಂಪಿಗೆ ಒಬ್ಬರೇ ಒಬ್ಬ ವಿಶೇಷ ಶಿಕ್ಷಕರಿರುತ್ತಾರೆ. ನನ್ನ ಮಗನ ಶಾಲೆಯಲ್ಲಿದ್ದ ವಿಶೇಷ ಶಿಕ್ಷಕರು ಶೈಕ್ಷಣಿಕ ವಿಚಾರದಲ್ಲಿ ಅವನಿಗೆ ಸಹಾಯ ಮಾಡಲು ವಾರದಲ್ಲಿ ಕೇವಲ ಒಂದೇ ಒಂದು ತರಗತಿ ನಡೆಸುತ್ತಿದ್ದರು. ವಿರಳ ಲಭ್ಯತೆ (ಪಾಲಕರ ಜೊತೆಗಿನ ನೇರ ಸಂವಾದಕ್ಕೆ ಸಂಬಂಧಿಸಿ) ಮತ್ತು ದೀರ್ಘ ಕೆಲಸದ ಅವಧಿ, ವಾಸ್ತವ ಸಂಭಾವನೆ ಇವೆಲ್ಲ ಅವರ ಅರ್ಹತೆಗೆ ಸರಿದೂಗುವಂತಿಲ್ಲ. ಶಿಕ್ಷಕರ ಕೊರತೆ ಈ ವಲಯದಲ್ಲಿ ಹೆಚ್ಚು. ವಿಶೇಷ ಶಿಕ್ಷಕರು ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹಾರುತ್ತಾ ಇರುತ್ತಾರೆ. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಇದು ಅವರ ವಿದ್ಯಾರ್ಥಿಗಳಲ್ಲಿ ಅಸುರಕ್ಷಿತ ಭಾವನೆಯನ್ನು ಉಂಟುಮಾಡುತ್ತದೆ. ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಕಲಿಕೆಯ ವಾತಾವರಣ ಎನ್ನುವುದು ನಿರೀಕ್ಷಿತ ಮಟ್ಟದಲ್ಲಿರಬೇಕು. ಭಾವನಾತ್ಮಕವಾಗಿ ಸುರಕ್ಷಿತ ಪ್ರದೇಶವಾಗಿರಬೇಕು. ಇದಕ್ಕಾಗಿ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ಸುಸ್ಥಿರ ಮತ್ತು ಗಟ್ಟಿಯಾದ ಸಂಬಂಧ ಅಗತ್ಯವಾಗಿದೆ.

ಖಾಸಗಿ ವಿಶೇಷ ಶಿಕ್ಷಣ ಮತ್ತು ವೃತ್ತಿಪರ ಚಿಕಿತ್ಸೆಯ ತರಗತಿಗಳ ವೆಚ್ಚ 45 ನಿಮಿಷದಿಂದ 1 ಗಂಟೆ ಅವಧಿಗೆ 400–600 ರೂಪಾಯಿಗಳವರೆಗೆ ಇರುತ್ತದೆ. ಬಹುತೇಕ ಪಾಲಕರಿಗೆ ಇದನ್ನು ಭರಿಸುವುದು ಕಷ್ಟ. ಇದು ಪಾಲಕರ ಆರ್ಥಿಕ ಸ್ಥಿರತೆಯನ್ನು ತೀವ್ರ ರೀತಿಯಲ್ಲಿ ಏರುಪೇರು ಮಾಡುತ್ತದೆ. ಮುಖ್ಯವಾಗಿ ಅವರಿಗೆ ಭವಿಷ್ಯದ ಉಳಿತಾಯ ಅಗತ್ಯ ಇರುವ ಹೊತ್ತಿಗೇ ಇದು ದುಬಾರಿ ಹೊರೆಯಾಗುತ್ತದೆ. ಈ ಚಿಕಿತ್ಸೆಗಳು ನಾಲ್ಕೈದು ವರ್ಷಗಳವರೆಗೆ ಮುಂದುವರಿಯಬಹುದು. ವಿಶೇಷ ಶಿಕ್ಷಣ ಮತ್ತು ವೃತ್ತಿಪರ ಚಿಕಿತ್ಸೆ, ಭಾಷೆ ಮತ್ತು ವಾಕ್ ಚಿಕಿತ್ಸೆಗಳಿಗೆ ಬೇಕಾದ ಸವಲತ್ತುಗಳನ್ನು ಶಾಲೆಗಳಲ್ಲಿ ಒದಗಿಸಿದರೆ ಪಾಲಕರು ಸಮಯ ಮತ್ತು ಹಣವನ್ನು ಉಳಿಸುವುದರ ಜೊತೆಗೆ ತಮ್ಮ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಇತರ ಅನುಭವಗಳ ಆಯ್ಕೆಯನ್ನು ಒದಗಿಸುವುದು ಸಾಧ್ಯವಾಗುತ್ತದೆ; ಕೌಶಲ ತರಗತಿಗೆ ಸೇರಿಸಿ ಅವರ ಆಂತರಿಕ ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಹೊರಹೊಮ್ಮಿಸಬಹುದು. ಉದಾಹರಣೆಗೆ, ಕುಂಬಾರಿಕೆ, ಕಲೆ ಮತ್ತು ಕರಕುಶಲತೆ, ಮಲ್ಟಿ ಮೀಡಿಯಾ, ನಾಟಕ, ಸಂಗೀತ, ಕ್ರೀಡೆ, ಅಡುಗೆ ಮತ್ತು ಬೇಕಿಂಗ್, ಹೀಗೆ ವಿವಿಧ ಅನುಭವಗಳು ವಿದ್ಯಾರ್ಥಿಗಳಿಗೆ ಒದಗಿಬರುತ್ತವೆ.

ಎರಡು ಮತ್ತು ಮೂರನೆಯ ಹಂತದ ನಗರಗಳಲ್ಲಿ ಬೇಕಾದ ಚಿಕಿತ್ಸೆಗಳನ್ನು ಒದಗಿಸುವ ಒಂದೋ ಎರಡೋ ಕೇಂದ್ರಗಳು ಮಾತ್ರ ಇರುತ್ತವೆ. ಶಾಲೆಗಳಲ್ಲಿ ಒಬ್ಬನೇ ಒಬ್ಬ ವಿಶೇಷ ಶಿಕ್ಷಕ ಕೂಡಾ ಇರುವುದಿಲ್ಲ. ದೆಹಲಿ, ಮುಂಬಯಿ, ಪುಣೆಯಂತಹ ಮೆಟ್ರೋ ನಗರಗಳಲ್ಲಿ ಪ್ರತಿ ವಾರ ಹೊಸ ಕೇಂದ್ರಗಳು ತಲೆ ಎತ್ತುತ್ತಿವೆ. ಅಲ್ಲಿ ಅತ್ಯುತ್ತಮ ವೃತ್ತಿಪರರನ್ನು ಒಳಗೊಂಡ ತಂಡ ಹೊಂದಿರುವ ಶಾಲೆಗಳು ಇವೆ. ಆದರೆ ಈ ಶಾಲೆಗಳು ದುಬಾರಿ ಶುಲ್ಕ ವಿಧಿಸುತ್ತವೆ. ಬಹುತೇಕ ಪಾಲಕರಿಗೆ ಇದು ಭರಿಸಲಾರದ ವೆಚ್ಚವಾಗಿರುತ್ತದೆ.

ಈ ಬಗೆಯ ಶಿಕ್ಷಣದ ಕುರಿತು ಭಾರತೀಯ ಪುನರ್ವಸತಿ ಮಂಡಳಿ– (Rehabilitation Council of India-RCI) ಯಿಂದ ಯಾವುದೇ ಮಾರ್ಗದರ್ಶಿ ಸೂತ್ರಗಳಿಲ್ಲ ಎನ್ನುವುದು ಉಲ್ಲೇಖನೀಯ ಅಂಶ. ಆರ್‌ಸಿಐ ಮತ್ತು ಸಿಬಿಎಸ್ಇ ಎರಡೂ ಜೊತೆ ಸೇರಿ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗಾಗಿ ನಿಯಂತ್ರಕ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕಾದ ಅಗತ್ಯ ಇದೆ. ಕೇವಲ ಇತ್ತೀಚೆಗಷ್ಟೇ, ಖಾಸಗಿ ಸಂಸ್ಥೆಗಳಲ್ಲಿ ವಿವಿಧ ವಿಕಲತೆಗಳಿಗೆ ಸಂಬಂಧಿಸಿದ ಡಿಪ್ಲೊಮಾ ಮತ್ತು ಬಿ.ಎಡ್ ಮಾಡುವ ವಿದ್ಯಾರ್ಥಿಗಳಿಗೆ ಹಾಜರಾತಿ ಕಡ್ಡಾಯಗೊಳಿಸಲಾಗಿದೆ. ಇದು ಈ ದಿಕ್ಕಿನಲ್ಲಿ ಸರಿಯಾದ ಹೆಜ್ಜೆ. ಶಾಲೆಗಳು ಪ್ರತಿವರ್ಷ ಮಕ್ಕಳನ್ನು ತಪಾಸಣೆ ಮಾಡಬೇಕು. ಅಗತ್ಯವಿರುವ ಸರಳವಾದ ಮತ್ತು ಹೆಚ್ಚು ವೈವಿಧ್ಯಮಯವಾದ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನು ಒದಗಿಸುವ ಕೆಲಸ ಮಾಡಬೇಕು.

ಕಡಿಮೆ ಗಮನ ಹೊಂದಿರುವ ಮಕ್ಕಳು ವೃತ್ತಿಪರ ಚಿಕಿತ್ಸಕರ ಸಲಹೆ ಪಡೆದು ವಿನ್ಯಾಸಗೊಳಿಸಿದ ಆಟ ಮತ್ತು ವ್ಯಾಯಾಮಗಳ ಮೂಲಕ ಬಹಳಷ್ಟು ಪ್ರಯೋಜನ ಪಡೆಯುತ್ತಾರೆ. ತರಗತಿಯಲ್ಲಿ ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಮತ್ತು ಸಾಮಾಜಿಕವಾಗಿ ಹೊಂದಿಕೊಳ್ಳುವುದಕ್ಕೆ ಕಷ್ಟಪಡುತ್ತಿರುವ ಮಕ್ಕಳನ್ನು ಶಾಲೆ ಮತ್ತು ಪಾಲಕರು ಎಷ್ಟು ಬೇಗ ಗುರುತಿಸುತ್ತಾರೋ ಅಷ್ಟು ಒಳ್ಳೆಯದು. ವೃತ್ತಿಪರರ ಸಹಾಯದೊಂದಿಗೆ, ಅಂದರೆ ಮಕ್ಕಳ ಬೆಳವಣಿಗೆ ತಜ್ಞರು, ವಿಶೇಷ ಶಿಕ್ಷಕರು ಮತ್ತು ವೃತ್ತಿಪರ ಚಿಕಿತ್ಸಕರ ನೆರವಿನೊಂದಿಗೆ ನಿರ್ದಿಷ್ಟ ಸಮಸ್ಯೆ ಏನು ಎಂದು ಗೊತ್ತು ಮಾಡಿಕೊಂಡರೆ ಈ ಮಕ್ಕಳ ಹಿತದೃಷ್ಟಿಯಿಂದ ಒಳಿತು. ಆಗ ಈ ಮಕ್ಕಳಿಗೆ ಬೇಕಾದ ಯೋಜನೆಯನ್ನು ಪ್ರಾಥಮಿಕ ತರಗತಿಯಿಂದಲೇ ಒದಗಿಸುವುದು ಸಾಧ್ಯವಾಗುತ್ತದೆ. ಇದು ಮುಖ್ಯಧಾರೆಯ ತರಗತಿ ಕೊಠಡಿಗಳಿಗೆ ಮಕ್ಕಳನ್ನು ಆದಷ್ಟು ಮಟ್ಟಿಗೆ ಹೊಂದಿಸಲು ಶಾಲೆಗಳಿಗೆ ಸಾಧ್ಯವಾಗುತ್ತದೆ. ಆಗ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಮತ್ತು ಸಾಮಾನ್ಯ ಶಿಕ್ಷಣದ ವಿಷಯ ಮತ್ತು ಸಕಾರಾತ್ಮಕವಾದ ಅತ್ಯುತ್ತಮ ಗೆಳೆತನ ಬೆಳೆಸುವುದು ಸಾಧ್ಯವಾಗುತ್ತದೆ. ಇದರಿಂದ ಅವರ ಕಲಿಕೆಗೆ ಹೆಚ್ಚು ಸಮೃದ್ಧವಾದ ಮತ್ತು ಸುರಕ್ಷಿತವಾದ ಅಡಿಪಾಯ ಒದಗುತ್ತದೆ.

ಕಲಿಕೆ ಎಂಬುವುದು ಪ್ರತ್ಯೇಕವಾಗಿಯೋ ಅಥವಾ ಭಾವನಾತ್ಮಕ ಆರೋಗ್ಯದ ಅಸ್ಥಿರತೆ ಇರುವಲ್ಲಾಗಲೀ ಸಂಭವಿಸುವಂಥದ್ದಲ್ಲ. ಮಕ್ಕಳು ತಮ್ಮ ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಬೇಕಾದರೆ, ಅವರನ್ನು ಬುದ್ಧಿವಂತ, ಸುರಕ್ಷಿತ, ಮತ್ತು ಆತ್ಮವಿಶ್ವಾಸದ ವಯಸ್ಕರನ್ನಾಗಿ ಬೆಳೆಸಬೇಕಿದ್ದರೆ ಅವರನ್ನು ಭವಿಷ್ಯಕ್ಕಾಗಿ ರೂಪಿಸುವಂಥ ದೈನಂದಿನ ತರಗತಿಯ ವಾತಾವರಣವು ಬೇಕಾಗುತ್ತದೆ. ಇದೆಲ್ಲ ವಿಶೇಷ ವ್ಯವಸ್ಥೆಯ ನಾಲ್ಕು ಗೋಡೆಯ ಮಧ್ಯೆ ಸಾಧ್ಯವಾಗದು. ಹೀಗೆ ವಿವಿಧ ಬಗೆಯ ವಿಕಲತೆಗಳನ್ನು ಅವುಗಳ ವಿವಿಧ ಹಂತಗಳನ್ನು ಗುರುತಿಸುವಂತೆ ನಮ್ಮ ಅಧ್ಯಾಪಕರನ್ನು ಸಂವೇದನಾಶೀಲರನ್ನಾಗಿ ಮಾಡಬೇಕಾಗಿದೆ. ಜೊತೆಗೇ ತರಗತಿಯಲ್ಲಿ ಎಲ್ಲ ವಿದ್ಯಾರ್ಥಿಗಳ

ಸಮಾನ ಭಾಗವಹಿಸುವಿಕೆಯನ್ನು ಖಾತರಿಪಡಿಸಲು ಸಹಾಯಕ-ವಾಗುವ ಯೋಜನೆಗಳನ್ನು ರೂಪಿಸಬೇಕು. ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ (National Institute of Open Schooling -NIOS) ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವರವಾಗಿ ಪರಿಣಮಿಸಿದೆ.ಯಾಕೆಂದರೆ ಅದು ಮಕ್ಕಳ ಶೈಕ್ಷಣಿಕ ಗುರಿಗಳನ್ನು ಅವರದ್ದೇ ಆದ ರೀತಿಗಳಲ್ಲಿ ಯಾವುದೇ ಅಣಕವಿಲ್ಲದೆ ಮತ್ತು ಅನಗತ್ಯ ಒತ್ತಡ ಹಾಕದೇ ಸಂಪೂರ್ಣಗೊಳಿಸುವುದಕ್ಕೆ ಸಹಾಯ ಮಾಡುತ್ತಿದೆ. ನರ ನ್ಯೂನತೆ ಇರುವ ವಿದ್ಯಾರ್ಥಿಗಳಿಗೂ ಉತ್ತರಗಳನ್ನು ಮಕ್ಕಿ ಕಾ ಮಕ್ಕಿ ಬರೆಯುವುದನ್ನು ತಪ್ಪಿಸಲು ತೆರೆದ ಪುಸ್ತಕದ ಪರೀಕ್ಷೆಯನ್ನು ಪರಿಗಣಿಸುತ್ತಿರುವ ಕಾಲದಲ್ಲಿದ್ದೇವೆ. ಇಂಥದ್ದೇ ವ್ಯವಸ್ಥೆಯನ್ನು ನಾವು ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗಾಗಿ ರೂಪಿಸಬೇಕಾಗಿದೆ. ಇದು ಅವರನ್ನು ಸ್ವತಂತ್ರ ಮತ್ತು ಘನತೆಯ ಬದುಕಿಗೆ ಸಿದ್ಧಗೊಳಿಸುವಲ್ಲಿ ಸಹಕಾರಿ ಆದೀತು. ಇಂತಹ ಬದುಕು ಅವರನ್ನು ಮುಖ್ಯಧಾರೆಯಲ್ಲಿ ಒಳಗೊಳ್ಳಿಸುವುದಕ್ಕೆ ಅತ್ಯಗತ್ಯ. ಪ್ರಸ್ತುತ ಪರಿಸ್ಥಿತಿಯು, ಬದ್ಧತೆ ಮತ್ತು ಸಮಗ್ರತೆಯ ಕೊರತೆಯಿಂದಾಗಿ ಆತಂಕದಿಂದ ಕೂಡಿದೆ. ಉದಾಹರಣೆಗೆ, ವಿದ್ಯಾರ್ಥಿಯ ವಿಕಲತೆಯ ಬಗ್ಗೆ ಸಂಪೂರ್ಣ ಜ್ಞಾನ ಇದ್ದರೂ, ಮಕ್ಕಳನ್ನು ಅನುತ್ತೀರ್ಣ-ಗೊಳಿಸುತ್ತಿದ್ದರೂ ವೈಯಕ್ತಿಕ ವಿದ್ಯಾರ್ಥಿಗಳಿಗಾಗಿ ಪಠ್ಯಕ್ರಮವನ್ನು ಪರಿಷ್ಕರಿಸಲು/ಮಾರ್ಪಡಿಸಲು ಶಾಲೆಗಳು ನಿರಾಕರಿಸುತ್ತವೆ. ಶಿಕ್ಷಕರು ತಮ್ಮ ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ಬಹುಮಾಧ್ಯಮ ನಿರೂಪಣೆಗಳನ್ನು ಬಳಸಿಕೊಳ್ಳಬಹುದು. ಹೀಗಿದ್ದರೂ ಉನ್ನತ ಮಟ್ಟದ ಶಾಲೆಗಳು ಈಗ ಸ್ಮಾರ್ಟ್ ಬೋರ್ಡ್‌ಗಳನ್ನು ಅಂಗೀಕರಿಸಿದ್ದರೂ ಅವುಗಳನ್ನು ಬಳಸುವುದಕ್ಕೆ ತಮ್ಮ ಅಧ್ಯಾಪಕರಿಗೆ ಸಮಯ ಕೊಡುವುದಿಲ್ಲ. ಯಾಕೆಂದರೆ ಅಧ್ಯಾಪಕರು ತಮ್ಮ ಪಠ್ಯಕ್ರಮ ಪೂರ್ತಿಗೊಳಿಸುವ ಧಾವಂತದಲ್ಲಿ ಇರುತ್ತಾರೆ. ವಿಶೇಷ ಅಗತ್ಯವುಳ್ಳ ಮಕ್ಕಳ ವೈಯಕ್ತಿಕ ಅಗತ್ಯಗಳಿಗೆ ಬೇಕಾದ ಬೋಧನಾ-ಕಲಿಕಾ ಸಾಮಗ್ರಿಗಳನ್ನು ಸಿದ್ಧಗೊಳಿಸಲು ಮತ್ತು ಬಳಸುವುದರಲ್ಲಿ ಗರಿಷ್ಠ ಪ್ರಮಾಣದ ಅಧ್ಯಾಪಕ-ವಿದ್ಯಾರ್ಥಿ ಅನುಪಾತವು ಇನ್ನೊಂದು ಅಡಚಣೆಯಾಗಿ ನಿಲ್ಲುತ್ತದೆ.

ನನ್ನ ಕೆಲವು ಅನುಭವಗಳು

ಸ್ವಲೀನತೆ (Autism spectrum disorder -ASD) ಹೊಂದಿರುವ ನನ್ನ ಮಗನಿಗೆ 'ಸಾಮಾನ್ಯ' ಶಾಲೆಯ ಕೊನೆಯ ತಿಂಗಳ ಅವಧಿಯಲ್ಲಿ ನೆರಳಾಗುವ ಅವಕಾಶ ನನಗೆ ದೊರಕಿತು. ಆ ತರಗತಿಯಲ್ಲಿ ಇದ್ದ ಮಕ್ಕಳು ವಿವಿಧ ಕಲಿಕೆ, ಅವಗಾಹನೆ, ಗಮನಗಳ ಮಟ್ಟವನ್ನು ಹೊಂದಿದ್ದರು. ಅದರಲ್ಲೂ ಹತ್ತು ಮಂದಿ ವಿದ್ಯಾರ್ಥಿಗಳು ವಿವಿಧ ಸಮಸ್ಯೆಗಳಿಂದಾಗಿ ಕಲಿಕಾ ನ್ಯೂನತೆಯನ್ನು ಹೊಂದಿದ್ದರು. ಭಾವನಾತ್ಮಕ ಸಮಸ್ಯೆ ಹೊಂದಿದ್ದ ಹುಡುಗಿಯೊಬ್ಬಳಿಗೆ ಹೆಚ್ಚಿನ ತರಗತಿಗಳಲ್ಲಿ ತನ್ನ ಕೆಲಸ ಮುಗಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಅದೇ ಹುಡುಗಿ ಅಬ್ಯಾಕಸ್ (Abacus) ತರಗತಿಯಲ್ಲಿ ಮಾತ್ರ ಅತ್ಯಂತ ಉತ್ಸಾಹದಿಂದ ಇರುತ್ತಿದ್ದಳು. ಅಲ್ಲಿ ಅಧ್ಯಾಪಕರು ಪ್ರಶ್ನೆಗಳನ್ನು ಸ್ಪಷ್ಟವಾಗಿ ಮತ್ತು ತಾಳ್ಮೆಯಿಂದ ಪುನರಾವರ್ತಿಸಿದಾಗ ಆಕೆ ಹೆಚ್ಚಿನ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡುತ್ತಿದ್ದಳು. ಅಧ್ಯಾಪಕರ ನಿರಂತರ ಪರಿಶ್ರಮ ಆಕೆಗೆ ಉತ್ತಮವಾಗಿ ನಿರ್ವಹಿಸುವುದಕ್ಕೆ ಸಹಾಯ ಮಾಡಿತು.

ಸಂಪೂರ್ಣ ಭಾಷಾ ಸಾಮರ್ಥ್ಯ ಇರುವ, ಆದರೆ ಇತರ ಕಲಿಕಾ ನ್ಯೂನತೆ ಇರುವ ವಿದ್ಯಾರ್ಥಿಗಳ ಪಾಲಕರು ವಿದ್ಯಾರ್ಥಿಯ ಮೌಲ್ಯಮಾಪನ ನಡೆಯಬೇಕು ಎಂಬ ಶಿಕ್ಷಕರ ಎಚ್ಚರಿಕೆಯನ್ನು ನಿರ್ಲಕ್ಷಿಸುತ್ತಾರೆ. ಅಂತಹ ಪ್ರಕರಣಗಳಲ್ಲಿ ಶಾಲೆ ಸಹಕಾರ ಮತ್ತು ಮಾರ್ಗದರ್ಶನವನ್ನು ನೀಡಬಲ್ಲುದು. ಶಾಲೆಯಲ್ಲಿರುವ ಅಭಿವೃದ್ಧಿ ತಜ್ಞರು ಮತ್ತು ವಿಶೇಷ ಶಿಕ್ಷಕರ ತಂಡ ತರಗತಿಯ ಒಳಗೆ ಮತ್ತು ಹೊರಗೆ ಅವರ ಮಗುವನ್ನು ಗಮನಿಸುವುದಕ್ಕೆ ಹೆತ್ತವರನ್ನು ಆಹ್ವಾನಿಸಬಹುದು ಮತ್ತು ಮಗು ನಿಜವಾಗಿಯೂ ಎಲ್ಲಿ ಕಷ್ಟಪಡುತ್ತಿದೆ ಎಂದು ನಿರ್ಧರಿಸಬಹುದು. ತರಗತಿ ಕೊಠಡಿಯ ಖಾಲಿ ಗೋಡೆಗಳು ಮಕ್ಕಳನ್ನು ನಿರುತ್ಸಾಹಿಗಳನ್ನಾಗಿಸುತ್ತವೆ. ಅವು ವಿದ್ಯಾರ್ಥಿಗಳ ಸೃಜನಕಲೆಗಳಿಂದ ತುಂಬಿಕೊಂಡಿರಬೇಕು. ನನ್ನ ಮಗ ವಾಹನಗಳ ಚಿತ್ರ ಮತ್ತು ವ್ಯಂಗ್ಯಚಿತ್ರದ ಪಾತ್ರಗಳನ್ನು ರಚಿಸುವುದನ್ನು, ಮೊಬೈಲ್ ಗೇಮ್‌ನ ಗ್ರಾಫಿಕ್ಸ್‌ಗಳ ಮರು-ಸೃಷ್ಟಿಯನ್ನು ಇಷ್ಟಪಡುತ್ತಾನೆ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಮಾತ್ರ ಕೈ ಚಪ್ಪಾಳೆ ತಟ್ಟುವುದು, ಆ ಮೂಲಕ, ಅದನ್ನೇ ಶೈಕ್ಷಣಿಕ ಅತ್ಯುನ್ನತಿಯ ಮಾನದಂಡ ಎಂದು ಎಳೆಮನಸ್ಸುಗಳಲ್ಲಿ ಬಿಂಬಿಸುವುದರ ಬದಲು, ಇಂತಹ ಶೈಕ್ಷಣಿಕೇತರ ಸಾಧನೆಗಳನ್ನು ನಾವು ಕೊಂಡಾಡೋಣ. ಮಂಡಳಿಯ / ಬೋರ್ಡ್ ಪರೀಕ್ಷೆಯಲ್ಲಿ ಪಡೆದ ಅಂಕಗಳು ಅನಂತರದ ಬದುಕಿನಲ್ಲಿ ಯಶಸ್ಸು ಕೊಡುತ್ತದೆ ಎಂಬ ಯಾವ ಖಾತರಿಯೂ ಇಲ್ಲ ಎನ್ನುವುದು ಸದ್ಯದ ಜಗತ್ತಿನಲ್ಲಿ ಪದೇ ಪದೇ ನಮಗೆ ನೆನಪಾಗುತ್ತಿದೆ. ತಮ್ಮ ಪೂರ್ಣ ಶಾಲಾ ಜೀವನದ ಅಧ್ಯಯನದಲ್ಲಿ ಬಹಳ ಹಿಂದೆ ಇದ್ದವರು ಇಂದು ಯಶಸ್ವಿಯಾಗಿ ವಿಶಿಷ್ಟ ಉದ್ಯಮಗಳನ್ನು ಸೃಷ್ಟಿಸಿದ್ದಾರೆ.

ಇಂದಿನ ಶಾಲೆಗಳು ಮಕ್ಕಳಲ್ಲಿ ಕಲಿಕಾ ಪರಿಸರವನ್ನು ಉತ್ತೇಜಿಸುವುದಕ್ಕೆ ಬೇಕಾದ ಮೂಲ ಸೌಕರ್ಯ ಮತ್ತು ಸಂಪನ್ಮೂಲಗಳನ್ನು ಹೊಂದಿವೆ. ಇವುಗಳನ್ನು ಕ್ರಿಯಾಶೀಲವಾಗಿ ಬಳಸಲು ಸಣ್ಣ ಪ್ರಯತ್ನ ನಡೆಯಬೇಕಾಗಿದೆ. ಮತ್ತೊಂದು ಅವಲೋಕನವೆಂದರೆ ಶೈಕ್ಷಣಿಕ ಅವಧಿಯಲ್ಲಿ ಸಂಪೂರ್ಣ ಜಾಗ್ರತೆ ಮತ್ತು ಶ್ರದ್ಧೆಯಿಂದ ಇರುವ ಹಾಗೆ ಮತ್ತು ತಮ್ಮ ತಮ್ಮ ಕೆಲಸವನ್ನು ತಾವೇ ನಿರ್ವಹಿಸುವುದಕ್ಕೆ ಸಹಾಯಕವಾಗುವ ಹಾಗೆ ಮಕ್ಕಳ ಚಲನೆಯ ವಿರಾಮ, ದೈಹಿಕ ವ್ಯಾಯಾಮ ಮತ್ತು ಇತರ ಇಂದ್ರಿಯಕ್ಕೆ ಸಂಬಂಧಿಸಿದ ವಿರಾಮಗಳೆಲ್ಲವನ್ನೂ ಮಕ್ಕಳಿಗೆ ಒದಗಿಸುವ ರೀತಿಯಲ್ಲಿ ದೈನಂದಿನ ವೇಳಾಪಟ್ಟಿಯನ್ನು ಯೋಜಿಸಬೇಕು. ಉದಾಹರಣೆಗೆ ದೆಹಲಿಯ ಶಾಲೆಯೊಂದು ತನ್ನ ತರಗತಿಯನ್ನು ಪ್ರಾರಂಭಿಸುವ ಮೊದಲು ಶೂನ್ಯ ಅವಧಿಯಲ್ಲಿ ಮಕ್ಕಳನ್ನು ಸ್ಕೇಟಿಂಗ್‌ನಲ್ಲಿ ತೊಡಗಿಸಿಕೊಳ್ಳುತ್ತದೆ. ಏಳು ವರ್ಷದ ನನ್ನ ಮಗನಿಗೆ ತನ್ನ ಕಲಿಕಾ ತೊಡಕುಗಳು ಮತ್ತು ಇಂದ್ರಿಯಕ್ಕೆ (ಸ್ವಲೀನತೆಗೆ ಸಂಬಂಧಿಸಿದ ಕೆಲವು ಅಸ್ವಸ್ಥತೆಗಳು) ಸಂಬಂಧಿಸಿದ ಸಮಸ್ಯೆಗಳಿಂದಾಗಿ ಶಾಲಾ ಶೈಕ್ಷಣಿಕ ಪಠ್ಯಕ್ರಮದ ಜೊತೆಗೆ ಹೆಜ್ಜೆ ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಅವನ ಕಾಗುಣಿತ ಸ್ಮರಣಾ ಸಾಮರ್ಥ್ಯ, ಈಜು ಮತ್ತು ನೀರಿನಾಳದ ಕೌಶಲಗಳನ್ನು ಕಂಡು ಅವನ ಸಹಪಾಠಿಗಳು ಬೆರಗಾಗುತ್ತಾರೆ. ನನ್ನನ್ನು ಭೇಟಿಯಾದಾಗ ಅವರು ಸಾಕಷ್ಟು ಪ್ರಶ್ನೆಗಳನ್ನು ಕೇಳಿದರು: ಹೇರಂಬ್ ಇದನ್ನು ಏಕೆ ಮಾಡುತ್ತಾನೆ? ಅದನ್ನು ಏಕೆ ಮಾಡುತ್ತಾನೆ? ಈ ದಿನಗಳಲ್ಲಿ ಆತ ಏಕೆ ಪ್ರತಿದಿನ ಶಾಲೆಗೆ ಬರುತ್ತಿಲ್ಲ? (ಛಾಯಾ ಶಿಕ್ಷಕರಿಲ್ಲದೆ ಶಾಲೆ ಆತನಿಗೆ ಪ್ರವೇಶ ನೀಡಲಿಲ್ಲ?) ಇಲ್ಲಿ ಮಹತ್ವದ ಸವಾಲು ಎಂದರೆ ಉತ್ತಮ ಛಾಯಾ ಶಿಕ್ಷಕರನ್ನು (ಶೈಕ್ಷಣಿಕ ಸಹಾಯಕ) ಹುಡುಕುವುದೇ ಆಗಿತ್ತು. ಅಂತಹ ಶಿಕ್ಷಕರಿಗೆ ತರಬೇತಿ ನೀಡುವ ಯಾವುದೇ ಸಂಸ್ಥೆಗಳಿಲ್ಲ. ಒಳಗಿನ ಶಿಕ್ಷಕರನ್ನೇ ಈ ಕೆಲಸಕ್ಕೆ ಒದಗಿಸಲು ಅಥವಾ ಈ ಪಾತ್ರಕ್ಕೆ ಒಗ್ಗಿಕೊಳ್ಳುವಂತೆ ತನ್ನದೇ ಸಿಬ್ಬಂದಿಗೆ ಸಹಾಯ ನೀಡಲು ಶಾಲೆಗಳಿಗೆ ಯಾವುದೇ ಸಮಯ ಮತ್ತು ಪ್ರೇರಣೆಯೂ ಇಲ್ಲ. ವಿಶೇಷ ಅಗತ್ಯವುಳ್ಳ ಮಗುವಿನ ಪಾಲಕಳಾಗಿ ನನಗೆ ಕೆಲ ದಿನಗಳ ಕಾಲ ಕಠಿಣವಾಗಿತ್ತು ಮತ್ತು ನನ್ನ ಮಗು ಕೌಶಲ ಕಲಿಯುವ ಸಂದರ್ಭದಲ್ಲಿ ನಾನು ತೀಕ್ಷ್ಣನೋಟಗಳನ್ನು

ಎದುರಿಸಬೇಕಿತ್ತು; ಜನ ತಾಜಾ ವಿಚಾರಗಳನ್ನು ಬಳಸಲು, ತಮ್ಮ ವಿಧಾನಗಳನ್ನು ಬದಲಾಯಿಸಲು ಒಪ್ಪುವುದಿಲ್ಲ. ಮಗುವಿನ ಸುರಕ್ಷೆ ಮತ್ತು ಕ್ಷೇಮವನ್ನು ತನ್ನದೇ ಕೈಯಲ್ಲಿ ಇರಿಸಿಕೊಂಡು ಅಡಗಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ. ಅದರ ಜೊತೆಗೆ ಜಗತ್ತಿನ ತೀರ್ಪಿನ ದೃಷ್ಟಿಯಿಂದಲೂ ತಪ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಯಾವತ್ತೂ ನಿಮ್ಮ ದುರ್ಬಲ ಮನಸ್ಸಿಗೆ ಅದನ್ನು ಬಿಡಬೇಡಿ. ಹಾಗೆ ಮಾಡಿದರೆ ನೀವು ನಿಮ್ಮ ಮಗುವಿಗೆ ಅನ್ಯಾಯ ಮಾಡಿದಷ್ಟೇ ಅಲ್ಲ, ಜೊತೆಗಿರುವ ಮಕ್ಕಳಿಗೂ ಅನ್ಯಾಯ ಮಾಡಿದಂತೆ. ನನಗೆ ಸಿಕ್ಕ ಪ್ರತೀ ಕಟು ಮಾತಿಗೂ ನಾನು ಸಾಕಷ್ಟು ಅನಿರೀಕ್ಷಿತ ಬೆಚ್ಚಗಿನ ಅನುಭವಗಳನ್ನೂ ಪಡೆದಿದ್ದೇನೆ. ಮಗು ತನ್ನ ಸಾಮರ್ಥ್ಯ ಪಡೆಯುವವರೆಗೆ ಸಹಾಯ ಮಾಡಲು ನನಗೆ ಇಂತಹ ಬೆಚ್ಚಗಿನ ಅನುಭವಗಳು ಧೈರ್ಯ ತುಂಬಿವೆ.

ವಿಶೇಷ ಅಗತ್ಯವುಳ್ಳ ಮಗುವಿಗೆ ಕಲಿಸುವ ಇಂತಹ ಅನುದಿನದ ಜಂಜಾಟದಲ್ಲಿ ಅತ್ಯಂತ ಪ್ರಮುಖವಾಗಿ ಆಕೆ ಅಥವಾ ಆತ ಮಗು ಎನ್ನುವುದನ್ನೇ ಮರೆತು ಬಿಡುತ್ತೇವೆ. ನಾನು ಈಗಲೂ ನೆನಪಿಸಿಕೊಳ್ಳುತ್ತೇನೆ. ನನ್ನ ಮಗನ ರೋಗ ನಿರ್ಣಯ (Diagnosis) ವರದಿ ಕೈಗಿತ್ತ ಮೇಲೆ, ನಂತರದ ಆರು ತಿಂಗಳವರೆಗೆ ನಾನು ಅವನ ಛಾಯಾಚಿತ್ರ ತೆಗೆಯಲು ಸಂಪೂರ್ಣ ಮರೆತೆ. ಅದಕ್ಕೂ ಮುನ್ನ ನಾನು ಆತನ ಪ್ರತಿ ನಗುವನ್ನೂ, ಚಲನೆಯನ್ನೂ ಇಂದಿನ ಸ್ಮಾರ್ಟ್‌ಫೋನ್‌ಗಳ ಕೃಪೆಯಿಂದ ಸೆರೆ ಹಿಡಿಯುತ್ತಿದ್ದೆ. ಚಿಕಿತ್ಸೆಗಾಗಿ ಮೂಲೆ ಮೂಲೆಗಳಿಗೆ ಅಲೆಯುತ್ತಿದ್ದಾಗಲೂ ಮುಕ್ತ ಗಾಳಿ ಮತ್ತು ಪರಿಸರದಲ್ಲಿ ಮಗುವಿಗೆ ಸಾಕಷ್ಟು ಸಮಯ ಕೊಡುವುದಕ್ಕೆ ಮರೆಯುತ್ತಿರಲಿಲ್ಲ. ಇದು ನನ್ನ ಮಗನಿಗೆ ಸಾಕಷ್ಟು ಪ್ರಮಾಣದಲ್ಲಿ ಸಹಾಯ ಮಾಡಿದೆ. ಅದು ಆತನ ಅನೇಕ ಇಂದ್ರಿಯ ಸಂಬಂಧಿ, ಸಮಸ್ಯೆಗಳನ್ನು, ನಿದ್ರೆಯ ಸಮಸ್ಯೆಗಳನ್ನು ನಿವಾರಿಸಿದೆ. ಜೊತೆಗೆ ಮನರಂಜನೆಯ ಕಲಿಕಾ ಅವಕಾಶಗಳನ್ನು ರೂಪಿಸಲು ಕೂಡ ಸಹಾಯ ಮಾಡಿದೆ.

ಈ ವಿಶೇಷ ಗುರುತು ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ವಿಶೇಷವಾದದ್ದು ಮಗುವಿಗೆ ಬೇಕಾಗಿದೆ, ವಿಶೇಷ ಶಾಲೆ, ವಿಶೇಷ ವ್ಯವಸ್ಥೆ ಹೀಗೆ ಇವೆಲ್ಲ. ಮುಂದೆ ನಾವು ವಿಶೇಷ ಕಾಲೇಜುಗಳು, ಆಸ್ಪತ್ರೆಗಳು, ಬ್ಯಾಂಕ್‌ಗಳು, ಮಾಲ್‌ಗಳು ಬರಲಿವೆಯೇ? ಹೀಗೆ ನಾವು ಮುಂದುವರೆಯಲಿದ್ದೇವೆಯೇ? (ಶಿಕ್ಷಣ) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ (Ministry of Human Resources Development-MHRD) ಹಸ್ತಕ್ಷೇಪ ಇದ್ದರೂ, ದೆಹಲಿ ಸರ್ಕಾರ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಅಂತರ್ಜಾಲದ ಮೂಲಕ ದಾಖಲಾತಿ ಅಭಿಯಾನ ನಡೆಸುತ್ತಿದ್ದರೂ, ತಮ್ಮ ಸುತ್ತ–ಮುತ್ತಲಿನ ಇಂತಹ ಮಕ್ಕಳನ್ನು ಸೇರಿಸಿಕೊಳ್ಳುವಂತೆ ಶಾಲೆಗಳ ಮೇಲೆ ಒತ್ತಡ ಹೇರುತ್ತಿದ್ದರೂ, ಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ಸೀಟು ಪಡೆಯುವುದಕ್ಕೆ ಪಾಲಕರಿಗೆ ಸಹಕಾರಿಯಾಗಿದ್ದರೂ, ಇದು ಮಕ್ಕಳ ಹಕ್ಕುಗಳಿಗಾಗಿ ಶಾಲಾ ಅಧಿಕಾರಿಗಳ ಜೊತೆಗಿನ ಹೋರಾಟದ ಒಂದು ಸುದೀರ್ಘ, ಭಯಾನಕ ಯಾತ್ರೆಯ ಕೇವಲ ಒಂದು ಆರಂಭ ಅಷ್ಟೇ. ಇಂದು ನಾವು ಈ ಹೋರಾಟದಿಂದ ನಾಚಿ ದೂರಸರಿದರೆ, ಭವಿಷ್ಯದಲ್ಲಿ ನಾವು ಒಳಗೊಳ್ಳುವ ಸಮಾಜದ ಕನಸು ಕಾಣುವುದನ್ನು ನಿಲ್ಲಿಸಬೇಕಾಗುತ್ತದೆ.

References

Sakhuja, S. (2004). Education for All and Learning Disabilities in India. Society for the Study of Peace and Conflict.

https://www.rehabcouncil.nic.in, Learning Disabilities, Rehabilitation Council of India.



ಅನುಪಮಾ ರೈ ಅವರು ಬಯೋಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವೀಧರರು. ಟಿಇಆರ್‌ಐ, ಸಿಐಐ ಮತ್ತು ಕೆನಡಾದ ಐಡಿಆರ್‌ಸಿಯಂತಹ ಸಂಸ್ಥೆಗಳಲ್ಲಿ ದುಡಿದಿದ್ದಾರೆ. ಈಗ ಅವರು ತಮ್ಮ ಸುಂದರ ಮಗುವಿನ ಆರೈಕೆಯಲ್ಲಿದ್ದಾರೆ. ಅವನ ಹಕ್ಕುಗಳಿಗಾಗಿ ಧ್ವನಿ ಎತ್ತುತ್ತಿದ್ದಾರೆ. ಪ್ರತಿದಿನ ಈ ನಿಟ್ಟಿನಲ್ಲಿ ಜನರನ್ನು ಹೆಚ್ಚು ಸಂವೇದನಾಶೀಲರನ್ನಾಗಿ ಮಾಡುತ್ತಿದ್ದಾರೆ. ಅನುಪಮಾ ಅವರನ್ನು anupma04@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಬಾಲಕೃಷ್ಣ ಹೊಸಂಗಡಿ** । ಪರಿಶೀಲನೆ: **ಲತಾ ಕೆ ಸಿ**